# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 747 |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಆದೇಶಗಳ ಪ್ರಕಾರ ರಾಜ್ಯದಲ್ಲಿ ಕಳೆದ 25 ವರ್ಷಗಳಿಂದೀಚೆ ಒತ್ತುವರಿಯಾದ ಅರಣ್ಯ ಭೂಮಿ ಮತ್ತು ಖಾಸಗಿಯವರಿಗೆ ಅಕ್ರಮವಾಗಿ ಮಂಜೂರಾದ ಅರಣ್ಯ ಭೂಮಿ ಎಷ್ಟು; (ಸಮಗ್ರ ವಿವರ ನೀಡುವುದು) | ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿರುವಂತೆ 2,04,442.16 ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿರುತ್ತದೆ ಹಾಗೂ ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ 42114.09 ಹೆ. ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಮಂಜೂರು ಮಾಡಲಾಗಿರುತ್ತದೆ. |
| ಆ) | ರಾಜ್ಯದ 13 ಅರಣ್ಯ ವೃತ್ತಗಳಲ್ಲಿ ಅಕ್ರಮವಾಗಿ ಹಂಚಿಕೆ ಆಗಿರುವ ಅರಣ್ಯ ಭೂಮಿಯ ಪ್ರಮಾಣವೆಷ್ಟು; (ಆಯಾ ವೃತ್ತಾವಾರು ವಿವರಗಳನ್ನು ನೀಡುವುದು) | ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ ರಾಜ್ಯದ 13 ಅರಣ್ಯ ವೃತ್ತಗಳಲ್ಲಿನ ಅರಣ್ಯ ಪ್ರದೇಶದಲ್ಲಿ ಮಂಜೂರಾಗಿರುವ ಅರಣ್ಯ ಭೂಮಿ ವಿವರ ಈ ಕೆಳಕಂಡಂತಿದೆ. |

| ಕ್ರ ಸಂ | ವೃತ್ತ | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) |
|---|---|---|
| 1. | ಬಳ್ಳಾರಿ | 1006.93 |
| 2. | ಬೆಳಗಾವಿ | 183.39 |
| 3. | ಬೆಂಗಳೂರು | 1556.29 |
| 4. | ಚಾಮರಾಜನಗರ | 0 |
| 5. | ಚಿಕ್ಕಮಗಳೂರು | 1137.37 |
| 6. | ಧಾರವಾಡ | 4037.43 |
| 7. | ಹಾಸನ | 3018.23 |
| 8. | ಕಲಬುರಗಿ | 4350.30 |
| 9. | ಕೊಡಗು | 174.24 |
| 10. | ಮಂಗಳೂರು | 64.34 |
| 11. | ಮೈಸೂರು | 12385.89 |
| 12. | ಶಿವಮೊಗ್ಗ | 12086.76 |
| 13. | ಶಿರಸಿ | 2112.92 |
| | **ಒಟ್ಟು** | **42114.09** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ನ್ಯಾಯಾಲಯದ ಆದೇಶಗಳು ಇದ್ದರೂ, ಕರ್ನಾಟಕ ಅರಣ್ಯ ಕಾಯಿದೆ ಜಾರಿಯಲ್ಲಿದ್ದರೂ ಇದ್ಯಾವುದನ್ನು ಲೆಕ್ಕಿಸದೆ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡಿರುವ ಅರಣ್ಯ ಭೂಮಿಯನ್ನು ವಾಪಸ್ ಪಡೆಯುವ ಇಲ್ಲವೇ ಅಷ್ಟೇ ಪ್ರಮಾಣದ ಭೂಮಿಯನ್ನು ಅರಣ್ಯ ಇಲಾಖೆಗೆ ಪರ್ಯಾಯವಾಗಿ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? | ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡಿರುವುದು ಕಾನೂನು ಬಾಹಿರವಾಗಿದ್ದು, ಸದರಿ ಮಂಜೂರಾತಿಗಳನ್ನು ರದ್ದುಪಡಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. |

**ಸಂಖ್ಯೆ: ಅಪಜೀ 38 ಎಫ್‌ಜಿಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ